# ರಾಜ್ಯದಲ್ಲಿನ ಬರ, ಪ್ರವಾಹ ಪರಿಸ್ಥಿತಿ ಹಾಗೂ ಇತರೆ ನೈಸರ್ಗಿಕ ವಿಪತ್ತುಗಳಿಂದ ಉದ್ಭವಿಸಬಹುದಾದ ಪರಿಸ್ಥಿತಿಯನ್ನು ಪರಾಮರ್ಶಿಸಲು ಮಾನ್ಯ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಚಿವ ಸಂಪುಟದ ಉಪ ಸಮಿತಿಯ ದಿನಾಂಕ:11.09.2018ರಂದು ನಡೆದ ಸಭೆಯ ನಡವಳಿ.

*****

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಇವರು ಸಭೆಗೆ ಆಗಮಿಸಿದ ಮಾನ್ಯ ಸಚಿವರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿದರು.

2. ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಕರಾವಳಿ ಹಾಗೂ ಮಲೆನಾಡು ಪ್ರದೇಶದಲ್ಲಿ ಅತಿವೃಷ್ಟಿಯಿಂದಾಗಿ ಪ್ರವಾಹ ಹಾಗೂ ಭೂಕುಸಿತದಿಂದ ಅಪಾರ ಪ್ರಮಾಣದಲ್ಲಿ ಜೀವ ಹಾನಿ, ಜಾನುವಾರುಗಳ ಹಾನಿ, ಮನೆಗಳ ಹಾನಿ, ಮೂಲಭೂತ ಸೌಲಭ್ಯಗಳಿಗೆ ಹಾನಿಯಾಗಿದ್ದು, ಹಾನಿಯ ಪ್ರಮಾಣವನ್ನು ರೂ.3499.52 ಕೋಟಿಗಳು ಎಂದು ಅಂದಾಜಿಸಲಾಗಿದೆ. ಮಾನ್ಯ ಮುಖ್ಯಮಂತ್ರಿಗಳು ದಿನಾಂಕ:10.09.2018ರಂದು ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ರಾಜ್ಯದ ಪ್ರವಾಹ ಪರಿಸ್ಥಿತಿಯನ್ನು ವಿವರಿಸಿ ಎಸ್‌ಡಿಆರ್‌ಎಫ್/ಎನ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ರೂ.1199.89 ಕೋಟಿ ಆರ್ಥಿಕ ನೆರವನ್ನು ಕೋರುತ್ತ ಮೆಮೊರಾಂಡಮ್ ಸಲ್ಲಿಸಿದ್ದಾರೆ. ಪ್ರಸ್ತುತ ಕೊಡಗು ಜಿಲ್ಲೆಯಲ್ಲಿ ಮಳೆ ಕಡಿಮೆಯಾಗಿದ್ದು, ಎಲ್ಲಾ ರಕ್ಷಣಾ ತಂಡಗಳನ್ನು ಹಿಂಪಡೆಯಲಾಗಿದೆ. ಬಾಧಿತ ಜನರಿಗೆ ಮಾರ್ಗಸೂಚಿಯಂತೆ ಪರಿಹಾರ ನೀಡುವ ಕಾರ್ಯ ಪ್ರಗತಿಯಲ್ಲಿದೆ.

ರಾಜ್ಯದಲ್ಲಿ ಪ್ರಸ್ತುತ 11 ಜಿಲ್ಲೆಗಳ 132 ಗ್ರಾಮಗಳಿಗೆ 185 ಟ್ಯಾಂಕರ್ ಮೂಲಕ ಹಾಗೂ 242 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ ಎಂಬ ಅಂಶವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ (ವಿ.ನಿ) ಇವರು ಸಮಿತಿಯ ಗಮನಕ್ಕೆ ತಂದಿರುತ್ತಾರೆ.

3. ರಾಜ್ಯದಲ್ಲಿ 74.80 ಲಕ್ಷ ಹೆಕ್ಟೇರ್ ಕೃಷಿ ಬೆಳೆಗಳ ಬಿತ್ತನೆ ಗುರಿ ಹೊಂದಿದ್ದು, ದಿನಾಂಕ:05.09.2018ರಂತೆ 62.88 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಸುಮಾರು 14.40 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಬೆಳೆಯು ತೇವಾಂಶದ ಕೊರತೆಯಿಂದ ಬಾಧಿತವಾಗಿದೆ. ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಮುಂಗಾರು ಋತುವಿನಲ್ಲಿ ಪರ್ಯಾಯ ಬೆಳೆ ಬೆಳೆಯಲು ಅವಧಿ ಮುಗಿದಿದ್ದು, ಹಿಂಗಾರು ಋತುವಿನಲ್ಲಿ ಮಳೆಯಾದ ನಂತರ ಬೆಳೆ ಬಿತ್ತನೆ ಮಾಡಬೇಕಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರ್ಯಾಯ ಬೆಳೆ ಯೋಜನೆಯಡಿ ಬಿತ್ತನೆ ಮಾಡಲು ಸೆಪ್ಟೆಂಬರ್ ಅಂತ್ಯದವರೆಗೆ ಅವಕಾಶವಿದೆ. ಜಿಲ್ಲೆಗಳಲ್ಲಿ ಪರ್ಯಾಯ ಬೆಳೆ ಯೋಜನೆಯ ಕುರಿತು ವ್ಯಾಪಕ ಪ್ರಚಾರ ನೀಡಲಾಗಿದೆ ಹಾಗೂ ಬಿತ್ತನೆ ಬೀಜದ ದಾಸ್ತಾನು ಸಂಗ್ರಹಿಸಲಾಗಿದೆ ಎಂಬ ಅಂಶವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರು ಸಮಿತಿಯ ಗಮನಕ್ಕೆ ತಂದಿರುತ್ತಾರೆ.

4. ಕುಡಿಯುವ ನೀರಿನ ಸಮಸ್ಯೆ ಎದುರಿಸಲು ಈವರೆಗೂ 427 ಬಹುಗ್ರಾಮ ಯೋಜನೆಗಳನ್ನು ಪೂರ್ಣಗೊಳಿಸಲಾಗಿದ್ದು, ಇದರಿಂದ 103 ಲಕ್ಷ ಜನರಿಗೆ ಶುದ್ಧ ಕುಡಿಯುವ ನೀರನ್ನು ಭೂಮೇಲ್ಮೈ ಜಲಮೂಲಗಳಿಂದ ಒದಗಿಸಲಾಗಿದೆ. 2017-18ನೇ ಸಾಲಿನ ಟಾಸ್ಕ್‌ಫೋರ್ಸ್ ಅಡಿಯಲ್ಲಿ ರೂ.100.00 ಕೋಟಿ ಬಿಡುಗಡೆಯಾಗಿದ್ದು, ಈವರೆಗೂ ರೂ.82.43 ಕೋಟಿ ವೆಚ್ಚವಾಗಿದೆ, 2018-19ನೇ ಸಾಲಿನಲ್ಲಿ ರಾಜ್ಯ ವಲಯ C&Q ಘಟಕದಡಿ ರೂ.30.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. 2018-19ನೇ ಸಾಲಿನಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗಾಗಿ (NRDWP) ರೂ.2200.00 ಕೋಟಿ ಅನುದಾನ ಲಭ್ಯವಿದ್ದು, ರೂ.503.00 ಕೋಟಿ ವೆಚ್ಚವಾಗಿದೆ. ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡುತ್ತಿರುವ ಗ್ರಾಮಗಳಿಗೆ ಶಾಶ್ವತ ನೀರು ಪೂರೈಸಲು ಕಾರ್ಯ ಯೋಜನೆ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಆಯುಕ್ತರು, ಗ್ರಾಮೀಣ ನೀರು ಸರಬರಾಜು ಇಲಾಖೆ ರವರು ಸಮಿತಿಯ ಗಮನಕ್ಕೆ ತಂದರು.

5. ರಾಜ್ಯದಲ್ಲಿ 1,29,08,292 ಮೇವು ಅವಲಂಬಿತ ಜಾನುವಾರುಗಳಿದ್ದು 102.19 ಲಕ್ಷ ಟನ್ ಮೇವು ಲಭ್ಯವಿದೆ. ಲಭ್ಯವಿರುವ ಮೇವು ಮುಂದಿನ 22 ವಾರಗಳಿಗೆ ಸಾಕಾಗುತ್ತದೆ. ಯಾವುದೇ ಗೋಶಾಲೆ ಅಥವಾ ಮೇವಿನ ಬ್ಯಾಂಕ್‌ಗಳನ್ನು ತೆರೆದಿರುವುದಿಲ್ಲ.

ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಲಭ್ಯವಿರುವ ಮೇವಿನ ಪ್ರಮಾಣವು 4-5ವಾರಗಳಿಗೆ ಮಾತ್ರ ಸಾಕಾಗಲಿದ್ದು, ಜಾನುವಾರು ಸಂರಕ್ಷಣೆಗಾಗಿ ಮುಂಜಾಗ್ರತಾ ಕ್ರಮವಾಗಿ ರೂ.15.00 ಕೋಟಿ ಮೊತ್ತದ ಮೇವಿನ ಬೀಜದ ಮಿನಿಕಿಟ್‌ಗಳನ್ನು ಒದಗಿಸಬೇಕಾಗಿದೆ ಎಂಬ ಅಂಶವನ್ನು ಸರ್ಕಾರದ ಕಾರ್ಯದರ್ಶಿಗಳು, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಇವರು ಸಮಿತಿಯ ಗಮನಕ್ಕೆ ತಂದರು.

6. ನಿರ್ದೇಶಕರು, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಬೆಂಗಳೂರು ಇವರು ರಾಜ್ಯದಲ್ಲಿನ ಮಳೆ ಪರಿಸ್ಥಿತಿ, ಜಲಾಶಯಗಳಲ್ಲಿನ ನೀರಿನ ಮಟ್ಟ, ಸಣ್ಣ ನೀರಾವರಿ ಕೆರೆಗಳ ನೀರಿನ ಮಟ್ಟ, ತೇವಾಂಶ ಕೊರತೆ, ಅಂತರ್ಜಲ ಮಟ್ಟ, ಮಳೆ ಮುನ್ಸೂಚನೆ ಇತ್ಯಾದಿ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ಸಮಿತಿಗೆ ಮಾಹಿತಿಯನ್ನು ನೀಡಿರುತ್ತಾರೆ.

ಮುಂದುವರೆದು, ಕೃಷಿ ಮಂತ್ರಾಲಯ, ಭಾರತ ಸರ್ಕಾರ ಹೊರತಂದಿರುವ ಬರ ನಿರ್ವಹಣೆ ಕೈಪಿಡಿ-2016ರಲ್ಲಿ ಸೂಚಿಸಿರುವಂತೆ ಕಡ್ಡಾಯ ಹಾಗೂ ತತ್ಪರಿಣಾಮ ಮಾನದಂಡಗಳನ್ನು ಪರಿಗಣಿಸಿ ಸೆಪ್ಟೆಂಬರ್ 6ರ ಅಂತ್ಯದ ಅನ್ವಯ ರಾಜ್ಯದ 86 ತಾಲ್ಲೂಕುಗಳನ್ನು ಬರ ಪೀಡಿತವೆಂದು ಘೋಷಿಸಲು ಅರ್ಹವಾಗಿದೆ (86 ತಾಲ್ಲೂಕುಗಳ ಪಟ್ಟಿ ಅನುಬಂಧದಲ್ಲಿ ನೀಡಿದೆ) ಎಂದು ಸಮಿತಿಯ ಗಮನಕ್ಕೆ ತಂದರು.

7. ರಾಜ್ಯದಲ್ಲಿ ಮುಂಗಾರು ಹಂಗಾಮಿನ ಮಳೆ-ಬೆಳೆ ಪರಿಸ್ಥಿತಿ, ಬಗ್ಗೆ ಸಮಗ್ರವಾಗಿ ಚರ್ಚಿಸಿದ ಸಮಿತಿಯು ಈ ಕೆಳಕಂಡ ಅಂಶಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ನಿರ್ಣಯಿಸಿದೆ.

ಅ) ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡುತ್ತಿರುವ ಗ್ರಾಮಗಳಲ್ಲಿ ಶಾಶ್ವತ ಕುಡಿಯುವ ನೀರು ಪೂರೈಕೆಗೆ ಗ್ರಾಮೀಣ ನೀರು ಸರಬರಾಜು ಇಲಾಖೆಯ ವತಿಯಿಂದ ಕ್ರಮ ಕೈಗೊಳ್ಳುವುದು. ಕುಡಿಯುವ ನೀರು ಪೂರೈಕೆ ಯೋಜನೆಗಳ ದುರಸ್ಥಿ ಕಾರ್ಯಗಳನ್ನು ತುರ್ತಾಗಿ ಕೈಗೊಳ್ಳುವುದು.

ಆ) ಬರ ಘೋಷಿಸಲು ಅರ್ಹವಿರುವ 86 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸುವುದು ಹಾಗೂ ತೀವ್ರ ಹಾಗೂ ಮಧ್ಯಮ ಬರ ಪೀಡಿತ ಪ್ರದೇಶಗಳು ಎಂದು ವಿಂಗಡಣೆಗಾಗಿ ಬೆಳೆ ಹಾನಿಯ ಪ್ರಮಾಣವನ್ನು ಕೇಂದ್ರ ಸರ್ಕಾರದ ಬರ ನಿರ್ವಹಣೆ ಕೈಪಿಡಿಯಲ್ಲಿರುವ ನಮೂನೆಯಲ್ಲಿ ಮಾಹಿತಿಯನ್ನು ಕೃಷಿ, ತೋಟಗಾರಿಕೆ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಜಂಟಿ ಸಮೀಕ್ಷೆ ನಡೆಸಿ ಮಾಹಿತಿಯನ್ನು ತುರ್ತಾಗಿ ಸರ್ಕಾರಕ್ಕೆ ಸಲ್ಲಿಸುವುದು.

ಇ) ಬರಪೀಡಿತವೆಂದು ಘೋಷಿಸಿದ 86 ತಾಲ್ಲೂಕುಗಳಲ್ಲಿ ಬರ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವ ಸಲುವಾಗಿ ಪ್ರತಿ ತಾಲ್ಲೂಕಿಗೆ ರೂ.50.00 ಲಕ್ಷದಂತೆ ಅನುದಾನವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಕೂಡಲೇ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಬಿಡುಗಡೆ ಮಾಡುವುದು ಹಾಗೂ ಈ ಅನುದಾನದಲ್ಲಿ ಟಾಸ್ಕ್‌ಫೋರ್ಸ್ ಮೂಲಕ ಅನುಮೋದನೆಗೊಂಡ ಕಾಮಗಾರಿಗಳನ್ನು ಕೈಗೊಳ್ಳುವುದು.

ಈ) ಉದ್ಯೋಗ ಸೃಜನೆ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು.

ಉ) ಜಾನುವಾರು ಸಂರಕ್ಷಣೆಗಾಗಿ ಮುಂದಿನ ದಿನಗಳಲ್ಲಿ ಮೇವಿನ ಕೊರತೆ ಉಂಟಾಗದಂತೆ ಮುಂಜಾಗ್ರತಾ ಕ್ರಮವಾಗಿ ಮೇವಿನ ಬೀಜದ ಮಿನಿಕಿಟ್‌ಗಳ ಪೂರೈಕೆಗಾಗಿ ರೂ.15.00 ಕೋಟಿಗಳನ್ನು ಪಶುಸಂಗೋಪನೆ ಇಲಾಖೆಗೆ ಬಿಡುಗಡೆ ಮಾಡುವುದು.

ಊ) ಕೊಡಗು ಜಿಲ್ಲೆಯಲ್ಲಿ ಪ್ರವಾಹದಿಂದಾದ ಭೂಕುಸಿತದ ಕಾರಣಗಳ ಕುರಿತು ತಜ್ಞರ ಸಮಿತಿಯಿಂದ ಮೌಲ್ಯಮಾಪನ ಮಾಡಿ ಸಮಿತಿಯ ವರದಿಯಂತೆ ಶಾಶ್ವತ ಪರಿಹಾರಕ್ಕಾಗಿ ಕ್ರಮ ಕೈಗೊಳ್ಳುವುದು.

ಋ) ಕೊಡಗು ಜಿಲ್ಲೆಯಲ್ಲಿ ಮನೆ ಕಳೆದುಕೊಂಡ ಸಂತ್ರಸ್ಥರಿಗೆ ಹೊಸ ಮನೆ ನಿರ್ಮಿಸಲು ತೋಟಗಾರಿಕೆ ಇಲಾಖೆಯಡಿಯಲ್ಲಿ ಲಭ್ಯವಿರುವ ಜಮೀನನ್ನು ಉಪಯೋಗಿಸಿಕೊಳ್ಳಲು ಕ್ರಮ ಕೈಗೊಳ್ಳುವುದು.

ಎ) ಜಿಲ್ಲೆಗಳ ಜಿಲ್ಲಾ ಉಸ್ತುವಾರು ಕಾರ್ಯದರ್ಶಿಗಳು ತಿಂಗಳಿಗೊಮ್ಮೆ ಜಿಲ್ಲೆಗಳಿಗೆ ಭೇಟಿ ನೀಡಿ ಪ್ರಗತಿ ಪರಿಶೀಲನೆ ಮಾಡುವುದು.

8. ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

**ಸಂಖ್ಯೆ:ಆರ್‌ಡಿ 105 ಟಿಎನ್‌ಆರ್ 2018**

**(ಆರ್.ವಿ ದೇಶಪಾಂಡೆ)**
ಕಂದಾಯ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ
ಜೀವನೋಪಾಯ ಸಚಿವರು.

**List of 86 Taluks of 23 Districts experiencing Sdrought Conditions in Kharif Season - 2018**
**As on 6th Sep**

| Dist Sl.No. | District | Sl.No. | Taluk |
|---|---|---|---|
| 1 | BENGALURU-RURAL | 1 | HOSAKOTE |
| 2 | RAMANAGARAM | 2 | CHANNAPATNA |
| | RAMANAGARAM | 3 | KANAKAPURA |
| 3 | KOLAR | 4 | BANGARAPET |
| | KOLAR | 5 | KOLAR |
| | KOLAR | 6 | MALUR |
| | KOLAR | 7 | MULABAGAL |
| | KOLAR | 8 | SRINIVASAPURA |
| 4 | CHIKBALLAPUR | 9 | BAGEPALLI |
| | CHIKBALLAPUR | 10 | CHIKBALLAPUR |
| | CHIKBALLAPUR | 11 | CHINTAMANI |
| | CHIKBALLAPUR | 12 | GAURIBIDANUR |
| | CHIKBALLAPUR | 13 | GUDIBANDA |
| | CHIKBALLAPUR | 14 | SIDLAGHATTA |
| 5 | TUMAKURU | 15 | C.N. HALLI |
| | TUMAKURU | 16 | GUBBI |
| | TUMAKURU | 17 | KORATAGERE |
| | TUMAKURU | 18 | KUNIGAL |
| | TUMAKURU | 19 | MADHUGIRI |
| | TUMAKURU | 20 | PAVAGADA |
| | TUMAKURU | 21 | SIRA |
| | TUMAKURU | 22 | TIPTUR |
| | TUMAKURU | 23 | TUMAKURU |
| 6 | CHITRADURGA | 24 | CHALLAKERE |
| | CHITRADURGA | 25 | CHITRADURGA |
| | CHITRADURGA | 26 | HIRIYUR |
| | CHITRADURGA | 27 | MOLAKALMURU |
| 7 | DAVANGERE | 28 | HARAPANAHALLI |
| | DAVANGERE | 29 | HARIHAR |
| 8 | CHAMARAJANAGAR | 30 | KOLLEGAL |
| | CHAMARAJANAGAR | 31 | YELANDUR |
| 9 | MANDYA | 32 | MADDUR |
| | MANDYA | 33 | MALAVALLI |
| | MANDYA | 34 | MANDYA |
| | MANDYA | 35 | NAGAMANGALA |
| | MANDYA | 36 | SRIRANGAPATNA |
| 10 | BALLARI | 37 | BALLARI |
| | BALLARI | 38 | HADAGALI |
| | BALLARI | 39 | HOSPET |
| | BALLARI | 40 | HAGARIBOMMANAHALLI |
| | BALLARI | 41 | KUDLIGI |
| | BALLARI | 42 | SANDUR |
| | BALLARI | 43 | SIRUGUPPA |

| Dist Sl.No. | District | Sl.No. | Taluk |
|---|---|---|---|
| 11 | KOPPAL | **44** | GANGAVATHI |
| | KOPPAL | **45** | KOPPALA |
| | KOPPAL | **46** | KUSHTAGI |
| | KOPPAL | **47** | YELBURGA |
| 12 | RAICHUR | **48** | DEODURGA |
| | RAICHUR | **49** | LINGSUGUR |
| | RAICHUR | **50** | MANVI |
| | RAICHUR | **51** | RAICHUR |
| | RAICHUR | **52** | SINDHANUR |
| 13 | KALABURGI | **53** | AFZALPUR |
| | KALABURGI | **54** | CHINCHOLI |
| | KALABURGI | **55** | CHITAPUR |
| | KALABURGI | **56** | KALABURAGI |
| | KALABURGI | **57** | JEWARGI |
| | KALABURGI | **58** | SEDAM |
| 14 | YADGIR | **59** | SHAHAPUR |
| | YADGIR | **60** | SHORAPUR |
| | YADGIR | **61** | YADGIR |
| 15 | BIDAR | **62** | BIDAR |
| | BIDAR | **63** | HUMNABAD |
| 16 | BELAGAVI | **64** | RAMDURG |
| | BELAGAVI | **65** | SOUNDATTI |
| 17 | BAGALKOTE | **66** | BADAMI |
| | BAGALKOTE | **67** | BAGALKOTE |
| | BAGALKOTE | **68** | HUNGUND |
| | BAGALKOTE | **69** | JAMKHANDI |
| 18 | VIJAPURA | **70** | BASAVANABAGEWADI |
| | VIJAPURA | **71** | BIJAPUR |
| | VIJAPURA | **72** | INDI |
| | VIJAPURA | **73** | MUDDEBIHAL |
| | VIJAPURA | **74** | SINDGI |
| 19 | GADAG | **75** | GADAG |
| | GADAG | **76** | MUNDARGI |
| | GADAG | **77** | NARAGUND |
| | GADAG | **78** | RON |
| | GADAG | **79** | SHIRAHATTI |
| 20 | HAVERI | **80** | RANIBENNUR |
| 21 | DHARWAD | **81** | HUBLI |
| | DHARWAD | **82** | NAVALGUND |
| 22 | HASSAN | **83** | ARASIKERE |
| | HASSAN | **84** | BELUR |
| | HASSAN | **85** | CHANNARAYAPATNA |
| 23 | CHIKKAMAGALURU | **86** | KADUR |